# ಆಚೆ– ಈಚೆ

'ಬಾಗಿಲನು ತೆಗೆದು ಸೇವೆಯನು ಕೊಡು ಹರಿಯೆ' ಎಂಬ ಸಾಲು ಭಗವಂತನ ದಾಸನಾದ ಭಕ್ತನ ಕೋರಿಕೆ ಮತ್ತು ಗುರಿಯನ್ನು ಹೇಳುತ್ತದೆ. ಬಾಗಿಲು ಎಂಬ ಪದದ ಅರ್ಥ ವಿನ್ಯಾಸಗಳು ಅದರ ಚಲನೆಯನ್ನು ಅವಲಂಬಿಸಿದೆ. 'ಬಾಗಿಲು ಮುಚ್ಚಿತ್ತು, ಬಾಗಿಲು ತೆರೆದಿತ್ತು' ಎಂಬ ಕ್ರಿಯೆಗಳು ನಿರಾಶೆಯ ಮತ್ತು ಆಶಾವಾದದ ಸಂಕೇತಗಳು. ದೇವರ ದಾಸಾನುದಾಸನಿಗೆ ಮುಚ್ಚಿದ ಕದ ತಾನು ತಲುಪಬೇಕಾದ ದಾರಿಯ ಅಡೆತಡೆಯಾದರೆ ತೆರೆದ ಕದ ಆಹ್ವಾನವನ್ನು ಕೊಡುವಂತದ್ದು. ತೆರೆದ ಬಾಗಿಲು, ತೆರೆದ ಬಾನು– ಮುಕ್ತತೆಯನ್ನು, ವಿಶಾಲವಾದ ಮನಸ್ಥಿತಿಯನ್ನು ಬಿಂಬಿಸುವಂತದ್ದು. ಇಟ್ಟಿಗೆಯಿಂದಾದ ಗೋಡೆಗಳು, ಹೋಗಲಿಕ್ಕೆ– ಬರಲಿಕ್ಕೆ ಕೂಡಿಸಿದ ಬಾಗಿಲುಗಳು, ಗಾಳಿ ಹೋಗಿ ಬರುವುದಕ್ಕೆ ಜೋಡಿಸಿದ ಕಿಟಕಿಗಳು– ಹೀಗೆ ವಿವರಿಸುತ್ತಾ ಹೋದರೆ ತನ್ನ ಕುಟುಂಬದವರೊಂದಿಗೆ ನೆಮ್ಮದಿಯಿಂದ ಜೀವಿಸಲು ಕಟ್ಟಿದ ಕಟ್ಟಡವೇ ಮನೆ. ಮತ್ತೆ ವಿವರಿಸುವುದಾದರೆ ಮನೆಯೆಂದರೆ ಕೇವಲ ಇಟ್ಟಿಗೆ, ಮರಳು, ಸಿಮೆಂಟಿನೊಂದಿಗೆ ಕಟ್ಟಿದ ಕಟ್ಟಡವಲ್ಲ, ಅಲ್ಲಿ ಪ್ರೀತಿಯಿದೆ, ನೆಮ್ಮದಿಯಿದೆ, ರಕ್ಷಣೆಯ ಬಂಧನಗಳಿವೆ ಹಾಗೂ ಭದ್ರತೆಯಿದೆ.

ಬಾಗಿಲು ಎನ್ನುವುದು ಬಂಧನವೂ ಹೌದು, ಬಿಡುಗಡೆಯ ಸಾಧನವೂ ಹೌದು. ವೈಶಾಖ ಶುದ್ಧ ಪೂರ್ಣಿಮೆಯ ದಿನ ಬಾಗಿಲು ತೆರೆದು ಹೊರ ಹೊರಟ ಬುದ್ಧ ಚಲಿಸಿದ್ದು ವಿಶಾಲವಾದ ಜಗತ್ತಿನೆಡೆಗೆ. ತಲುಪಿದ್ದು ತನ್ನನ್ನು ಪ್ರೀತಿಸುವ ಜನರನ್ನು ಹಾಗೂ ಬಿಡುಗಡೆಯ ಅಪೇಕ್ಷೆಯಲ್ಲಿದ್ದ ನೊಂದು ಬೆಂದವರನ್ನು. ಉತ್ತರೆ ಮಳೆಯ ಉತ್ತರೆ ತನ್ನ ಅತ್ತೆಯ ಮನೆಯಿಂದ ಹೊರಗೆ ಕಳುಹಿಸಿದ ನಂತರ ನೇರವಾಗಿ ಹಿಡಿದಿದ್ದು ತವರಿನ ದಾರಿಯನ್ನು. ಪ್ರಸಿದ್ಧ ಜನಪದ ಕಾವ್ಯದಲ್ಲಿನ ಕಥೆ ಹೇಳುವಂತೆ ಒಲ್ಲದ ಸೊಸೆಯಾದ ಉತ್ತರೆಯನ್ನು ಅತ್ತೆ ಹೊರ ಹಾಕುತ್ತಾಳೆ. ಸೊಂಟದಲ್ಲಿ ಒಂದು ಕೂಸು, ಕೈಯಲ್ಲಿ ಇನ್ನೊಂದು ಕೂಸನ್ನು ನಡೆಸುತ್ತಾ ತವರಿಗೆ ಬಂದು ಬಾಗಿಲು ಬಡಿಯುತ್ತಾಳೆ. ಅಣ್ಣನ ಮನೆ, ಅಕ್ಕನ ಮನೆ ಬಾಗಿಲು ಬಡಿಯುತ್ತಾ ಮನೆಯಿಂದ ಮನೆಗೆ ಸಾಗುತ್ತಾಳೆ. ಯಾರೂ ಬಾಗಿಲು ತೆಗೆಯುವುದಿಲ್ಲ. ಗಂಡ ತೊರೆದ ಹೆಣ್ಣನ್ನು ನಮ್ಮ ಸಮಾಜ ಹೇಗೆ ಕಾಣುತ್ತಿತ್ತು ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆಯಾಗಿದೆ. ಕೊನೆಗೆ ತಾಯಿಯ ಮನೆಗೆ ಬಂದು ಬಾಗಿಲು ತಟ್ಟಿದಾಗ ಸಮಾಜದಿಂದ ರೂಪಿಸಲ್ಪಟ್ಟ, ಬಂಧಿಸಲ್ಪಟ್ಟ ಆ ತಾಯಿ 'ಸಾವು ನೋವು ನಿನಗೆ ಇರಬೇಕೆ ನನ ಮಗಳೆ, ಉತ್ತರೆ ಮಳೆಯಾಗಿ ಹೋಗಮ್ಮಾ' ಎಂದು ಶಾಶ್ವತವಾದ ದಾರಿ ತೋರುತ್ತಾಳೆ. ತಾಯಿಯೂ ಕೂಡ ಒಂದು ಕಾಲದಲ್ಲಿ ಗಂಡ, ಗಂಡನ ಮನೆಯವರ ಕ್ರೌರ್ಯಕ್ಕೆ ಒಳಗಾದವಳೇ ಆದ್ದರಿಂದ ಈ ಮಾತನ್ನು ಹೇಳಲು ಅವಳಿಗೆ ಸಾಧ್ಯವಾಗುತ್ತದೆ.

ಅಕ್ಕಮಹಾದೇವಿ ಕೂಡ ಬಿಡುಗಡೆಯ ದಾರಿ ಹುಡುಕಿ ಹೊರಟಿದ್ದಳು. ಮದುವೆಯ ನಂತರ ಕರಾರುಗಳನ್ನು ಕೌಶಿಕ ಮುರಿದಾಗ ಅಕ್ಕಮಹಾದೇವಿ ಉಟ್ಟ ಬಟ್ಟೆಯ ಹಂಗನ್ನೂ ತೊರೆದು ಅತ್ತ ಸಂಗಾತಿಯ ಹುಡುಕಾಟದ ಹಾದಿಯಲ್ಲಿ ಹೊರಟಳು. ತುಂಬು ಯೌವ್ವನದ ಈ ಹೆಣ್ಣು ಒಬ್ಬಳೇ ಕಲ್ಯಾಣದ ಕಡೆಗೆ ಹೊರಟಾಗ ಅವಳು ಎದುರಿಸಿದ ಕಷ್ಟಗಳ ಬಗ್ಗೆ ವಿವರಗಳು ಲಭ್ಯವಿಲ್ಲ. ಎಲ್ಲಾ ಕಾಲದಲ್ಲೂ ಹೆಣ್ಣನ್ನು ದೇಹ ಮೂಲವಾಗಿಯೇ ನೋಡಿರುವುದರಿಂದ ಪುರುಷರ ನೋಟದಿಂದ ಹೇಗೆ ತನ್ನನ್ನು ಕಾಪಾಡಿಕೊಂಡಳು ಎಂಬುದೇ ವಿಸ್ಮಯ. ಇಂತಹ ಚರ್ಚೆಗಳು ಎದುರಾದಾಗಲೆಲ್ಲಾ ಪವಾಡಗಳು ಕಾಲಿಡುತ್ತವೆ ಹಾಗೂ ಚರಿತ್ರೆ ಮೌನ ವಹಿಸುತ್ತದೆ. ಉತ್ತರೆ ಮಳೆಯಾಗುವ ಹಾದಿ ಹಾಗೂ ಅಕ್ಕಮಹಾದೇವಿ ಕದಳಿಯ ಹಾದಿ– ಈ ಎರಡೂ ಸಂಗತಿಗಳು ಸಮಾಜದಿಂದ ವ್ಯಕ್ತವಾಗಿ ಕುಟುಂಬವೆಂಬ ಚೌಕಟ್ಟಿನಿಂದ ಹೊರಬಂದು ತಮ್ಮ ಗಮ್ಯವನ್ನು ಕಂಡುಕೊಳ್ಳುವ ಕಡೆ ಗಮನ ಸೆಳೆಯುತ್ತವೆ.

ಈ ಸಂದರ್ಭದಲ್ಲಿ ಹೆನ್ರಿಕ್ ಇಬ್ಸನ್ನನ 'ಎ ಡಾಲ್ಸ್ ಹೌಸ್' ನಾಟಕದ 'ನೋರಾ' ನೆನಪಾಗುತ್ತಾಳೆ. ಈ ನಾಟಕ ಮಹಿಳೆಯರ ಚರಿತ್ರೆಯಲ್ಲಿ ದೊಡ್ಡ ಪಾತ್ರ ವಹಿಸಿತು. ಈ ನಾಟಕದ ಮೊದಲ ಪ್ರದರ್ಶನವಾದಾಗ ಜನ ಗದ್ದಲ ಎಬ್ಬಿಸಿದರು. ಈ ಬೊಂಬೆ ಮನೆಯ ನಾಯಕಿ ಮೊದಲ ಬಾರಿಗೆ ತಾನೇ ಕಟ್ಟಿದ ತನ್ನ ಮನೆಯಿಂದ ಬಾಗಿಲು ಒಡೆದು ಹೊರಬಂದು ತನ್ನ ದಾರಿಯನ್ನು ತಾನೇ ಹುಡುಕ ಹೊರಟಿದ್ದನ್ನು ಪುರುಷ ವರ್ಗ ಒಪ್ಪಿಕೊಳ್ಳಲು ಸಾಧ್ಯವಿರಲಿಲ್ಲ. ಈ ನಾಟಕ 70ರ ದಶಕದಲ್ಲಿ ಕನ್ನಡಕ್ಕೆ ಅನುವಾದದ ಮೂಲಕ ಕಾಲಿಟ್ಟಿತ್ತು. ಜಾಗತಿಕ ರಂಗಭೂಮಿಯ ಇತಿಹಾಸದಲ್ಲಿ ಮೊದಲ ಬಾರಿಗೆ ಸುಂದರವಾದ ಹೆಣ್ಣು ಮಗಳೊಬ್ಬಳು 'ಆಲೋಚಿಸುವ, ನಿರ್ಧಾರ ತೆಗೆದುಕೊಳ್ಳುವ' ಶಕ್ತಿಯನ್ನು ಸಹ ಹೊಂದಿದ್ದಾಳೆ ಎಂಬುದನ್ನು ಮತ್ತೆ ಮತ್ತೆ ಸಾಬೀತು ಪಡಿಸಲಾಯಿತು.

ನೋರಾ ಒಂದು ಮನೆಗೆ, ಒಂದು ಕಾಲಕ್ಕೆ, ಒಂದು ದೇಶಕ್ಕೆ ಮಾತ್ರ ಸೀಮಿತಳಲ್ಲ. ಎಲ್ಲಾ ಕುಟುಂಬಗಳಲ್ಲಿರುವ ಹೆಣ್ಣಾಗಿದ್ದು ಸಾಂಸಾರಿಕ ಜವಾಬ್ದಾರಿ, ದಿನನಿತ್ಯದಲ್ಲಿನ ಎಲ್ಲರ ರಗಳೆಗಳನ್ನು ಮೈಮೇಲೆ ಹೊತ್ತವಳು. ಬಸವಳಿದವಳು. ಗಂಡ ತನ್ನನ್ನು ಪ್ರೀತಿಸುತ್ತಾನೆ, ಮಕ್ಕಳು ಕೇವಲ ತನ್ನ ಮೇಲೆ ಅವಲಂಬಿತರು ಎಂಬ ಭ್ರಮಾದೀನ ಅವಸ್ಥೆಯಲ್ಲಿಯೇ ತನ್ನ ಜೀವಿತದ ಬಹುಪಾಲು ಅವಧಿಯನ್ನು ಅವರಿಗಾಗೇ ಮೀಸಲಿಟ್ಟಿದ್ದಾಳೆ. ತಾನು ಏನಾಗಿದ್ದೇನೆ, ಏನು ಬೇಕು, ತನ್ನ ಅಸ್ತಿತ್ವವೆಂದರೆ ಏನು– ಇದೆಲ್ಲವನ್ನು ಯೋಚಿಸಲು ಪುರುಸೊತ್ತು ಕೂಡ ಅವಳಿಗಿಲ್ಲ. ಒಂದು ದಿನ, ಒಂದು ಬೆಳಗು ಅವಳ ಬದುಕನ್ನು ಬದಲಿಸಿ ಬಿಡುತ್ತದೆ. ಗಂಡನ ಅನಾರೋಗ್ಯದ ಸಂದರ್ಭದಲ್ಲಿ ಅವನ ಚಿಕಿತ್ಸೆಗೆಂದೇ ಸಾಲ ಮಾಡುತ್ತಾಳೆ. ಅದನ್ನು ಗಂಡನಿಂದ ಮುಚ್ಚಿಡುತ್ತಾಳೆ. ಮುಂದೊಂದು ದಿನ ಸಾಲ ಕೊಟ್ಟವನು ಅವಳನ್ನು ಕಾಡುತ್ತಾ ಬ್ಲ್ಯಾಕ್‌ಮೇಲ್ ಮಾಡಲು ಆರಂಭಿಸುತ್ತಾನೆ. ಅದುವರೆಗೂ ಗಂಡ ಹೆಂಡರಿಬ್ಬರೂ ನಡೆಸುತ್ತಿದ್ದ ಪ್ರೀತಿಯೆಂಬ ಆಟದ ಜೀವನದಲ್ಲಿ ಬಿರುಕು ಬಿಡುತ್ತದೆ. ಮಕ್ಕಳಿಗೆ, ಗಂಡನಿಗೆ, ಕುಟುಂಬಕ್ಕೆ ಮಾದರಿಯಾಗದ ಹೆಣ್ಣು ನೀನು ಎಂದು ಅವಳನ್ನು ದೂಷಿಸುತ್ತಾನೆ. ಇನ್ನು ಮುಂದೆ ಸಮಾಜದ ದೃಷ್ಟಿಯಲ್ಲಿ ಮಾತ್ರ ನಾವು ಗಂಡ ಹೆಂಡಿರು ಎಂದು ಘೋಷಿಸುತ್ತಾನೆ. ಇಲ್ಲಿ ಮತ್ತೊಮ್ಮೆ ಅಗಸನೊಬ್ಬನ ಮಾತಿಗಾಗಿ ಸೀತೆಯನ್ನು ಕಾಡಿಗಟ್ಟಿದ ರಾಮ ನೆನಪಾಗುತ್ತಾನೆ. ನೋರಾ ತಾನು ಕಟ್ಟಿದ ಈ ಬೊಂಬೆಯಂತಹ ಆಟಿಕೆಯ ಮನೆಯಲ್ಲಿ ಇರಲು ಸಾಧ್ಯವಿಲ್ಲವೆಂದು ತನ್ನದೇ ಶಾಶ್ವತವಾದ ಮನೆಯೊಂದನ್ನು ಕಂಡುಕೊಳ್ಳಲು ತೀರ್ಮಾನಿಸುತ್ತಾಳೆ. ಬಾಗಿಲು ಬಡಿದು ವಿಶಾಲವಾದ, ಗಾಳಿ ಬೆಳಕಿನಿಂದ ಕೂಡಿದ ಜಗತ್ತಿಗೆ ಕಾಲಿಡುತ್ತಾಳೆ. ಇಂದಿಗೂ ಬಾಗಿಲಿನಿಂದ ಹೊರಬರಲಾರದ, ಹೊಸ್ತಿಲೆಂಬ ಗಡಿಯನ್ನು ದಾಟಲಾರದ, ಗಾಳಿ ಬೆಳಕಿಗಾಗಿ ಹಂಬಲಿಸುವ ಸೀತೆಯರು ಮತ್ತೆ ಮತ್ತೆ ನೆನಪಾಗುತ್ತಾರೆ. ಇದರ ಜೊತೆಯಲ್ಲೇ ಬಾಗಿಲಿಂದಾಚೆ ಬದುಕನ್ನು ಕಂಡುಕೊಂಡ ಅಸಂಖ್ಯಾತ ನೋರಾಗಳಂತಹ ಚೇತನಗಳು ಮತ್ತೆ ಮತ್ತೆ ಎದುರಾಗುತ್ತಾರೆ.

**■ ಅಮೃತಮತಿ**

## ಮಾತೇ ಮುತ್ತು

- ನಮಗೆ ಸಿಗದೇ ಇರುವುದನ್ನು ದ್ವೇಷಿಸುವುದು ಬಹಳ ಸುಲಭ.
  —ಈಸೋಪ
- ರಾಜಕೀಯವನ್ನೂ ನೀತಿಯನ್ನೂ ಬೇರೆ ಬೇರೆ ಎಂದು ಎಣಿಸಿದವರು ಎರಡನ್ನೂ ತಿಳಿದುಕೊಳ್ಳಲಾರರು.
  —ಜಿ.ವಿ. ಮಾರ್ಲೆ
- ದೇವರು ನಮಗೆ ಬೇಕಾಗಿರುವುದು ನಮ್ಮ ಭದ್ರತೆಗಾಗಿ.
  —ರಬ್ಬಿ ಲಿಯೊನೆಲ್ ಬ್ಲೂ
- ನಿಜವಾದ ಯಶಸ್ಸು ಇರುವುದು ಕಾರ್ಯದಕ್ಷತೆಯಲ್ಲಿ.
  —ರಾಬರ್ಟ್ ಸ್ಟೀವನ್ ಸನ್
- ಅರ್ಹರ ಮುಂದೆ ಕೊಂಕಿಲ್ಲದ ತಪ್ಪೊಪ್ಪಿಗೆ, ಮತ್ತೆ ಮಾಡೆನೆಂಬ ಭರವಸೆ ಪರಿಶುದ್ಧವಾದ ಪಶ್ಚಾತ್ತಾಪ.
  —ಗಾಂಧೀಜಿ
- ನಾಯಿ ಹಾಲು ನಾಯಿಂಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯ!
  — ಬಸವಣ್ಣ